ದಿನಾಂಕ 03.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ವಿ.ಜಿ.ಆರ್ ರವರಿಂದಃ-**

ಕೀತಿಯಂಡ ಕುಟುಂಬಕ್ಕೆ ಕೆದಮಳ್ಳೂರು ಮತ್ತು ತೋರಾ ಗ್ರಾಮದಲ್ಲಿ ಆಸ್ತಿಗಳು ಇವೆ. ಕುಟಂಬದಲ್ಲಿ ಆದಂತಹ ಮೌಖಿಕ ವಿಭಾಗದ ಪ್ರಕಾರ ಸರ್ವೆ ನಂ. 487 ರಲ್ಲಿ 6.50 ಎಕರೆ, ಸರ್ವೆ ನಂ. 400 ಮತ್ತು ಸರ್ವೆ ನಂ. 483 ರಲ್ಲಿ 4.50 ಎಕರೆ, ಸರ್ವೆ ನಂ. 525 ರಲ್ಲಿ 2 ಎಕರೆ ಗದ್ದೆ ಜಮೀನು, ಸರ್ವೆ ನಂ. 488 ರಲ್ಲಿ 3 ಎಕರೆ ಗದ್ದೆ ಜಮೀನು, ಸರ್ವೆ ನಂ. 465 ರಲ್ಲಿ 3 ಎಕರೆ ಗದ್ದೆ ಜಮೀನು. ಸರ್ವೆ ನಂ. 71 ರಲ್ಲಿ 60 ಸೆಂಟ್ಸ್ ಜಮೀನುಗಳು ನನ್ನ ತಂದೆಯ ಹಿಸ್ಸೆಗೆ ಬಂದಿರುತ್ತವೆ ಎಂದರೆ ಸರಿ. ಸರ್ವೆ ನಂ. 487 ಬಾಣೆ ಜಮೀನು ಆಗಿದ್ದು, ನನ್ನ ತಂದೆಯು ಕಾಫಿ ಕೃಷಿ ಮಾಡಿದ ಬಳಿಕ, ಸರ್ವೆ ನಂ. 487/2 ಆಗಿರುತ್ತದೆ ಎಂದರೆ ಸರಿ. ನನ್ನ ತಂದೆಯ ಹಿಸ್ಸೆಗೆ ಬಂದಿದ್ದಂತಹ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ.

ಮೌಖಿಕ ವಿಭಾಗದ ಮೂಲಕ ನನ್ನ ತಂದೆಯ ಹಿಸ್ಸೆಗೆ ಆಸ್ತಿಗಳು ಬಂದ ಸಂದರ್ಭದಲ್ಲಿ ಬಾಣೆ ಜಮೀನು ಆಗಿದ್ದು, ನಂತರ ಅವರು ಕಾಫಿ ಕೃಷಿ ಮಾಡಿರುತ್ತಾರೆ. ನನ್ನ ತಂದೆ ಸೇನೆಯಲ್ಲಿ ಸೇವೆಯಲ್ಲಿ ಇದ್ದರು. ನನ್ನ ತಂದೆಯು ಸೇನೆಯ ಸೇವೆಯನ್ನು ಬಿಟ್ಟು ಬಂದ ಬಳಿಕ, ಆರೋಗ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ನನ್ನ ತಂದೆಗೆ ಕೃಷಿ ಆದಾಯದ ಜೊತೆಗೆ ವೇತನ ಸಹಾ ಪಡೆಯುತ್ತಿದ್ದರು ಎಂದರೆ ಸರಿ. ಮಾರ್ಚ್ 1987 ರಲ್ಲಿ ನನ್ನ ವಿವಾಹವಾಗಿರುತ್ತದೆ. ನನ್ನ ಪತ್ನಿ ಸರ್ಕಾರಿ ಸೇವೆಯಲ್ಲಿ ಇದ್ದರು. ವಿವಾಹವಾದ ಬಳಿಕ ನಾನು ನನ್ನ ಪತ್ನಿಯೊಂದಿಗೆ ವಿರಾಜಪೇಟೆಯಲ್ಲಿ ನೆಲೆಸಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಪತ್ನಿಯು ವಿರಾಜಪೇಟೆಯಲ್ಲಿ ಇದ್ದು, ನಾನು ಕೆದಮಳ್ಳೂರಿನಲ್ಲಿ ನನ್ನ ತಂದೆ ತಾಯಿಯೊಂದಿಗೆ ವಾಸವಾಗಿದ್ದೆನು ಎಂದು ಉತ್ತರಿಸಿರುತ್ತಾರೆ. ವಿವಾಹವಾದ ಬಳಿಕ ನಾನು ಮತ್ತು ನನ್ನ ತಂದೆ ಕುಟುಂಬದ ಸ್ವತ್ತುಗಳನ್ನು ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಪ್ರಕಾರ ಸರ್ವೆ ನಂ. 400 ಮತ್ತು ಸರ್ವೆ ನಂ. 483 ರಲ್ಲಿ 4.50 ಎಕರೆ, ಸರ್ವೆ ನಂ. 525

ರಲ್ಲಿ 2 ಎಕರೆ, ಸರ್ವೆ ನಂ. 488 ರಲ್ಲಿ 2 ಎಕರೆ ನನ್ನ ಹಿಸ್ಸೆಗೆ ಬಂದಿರುತ್ತವೆ ಎಂದರೆ ಸರಿಯಲ್ಲ. ವಿಭಾಗದ ಪ್ರಕಾರ ಸದರಿ ಸ್ವತ್ತುಗಳು ನನ್ನ ಹಿಸ್ಸೆಗೆ ಬಂದಿದ್ದು, ನಾನು ಅವುಗಳನ್ನು ಅನುಭವಿಸಿಕೊಂಡು ಬರುತ್ತಿದ್ದೇನೆ ಎಂದರೆ ಸರಿಯಲ್ಲ. ವಿವಾಹವಾದ ಬಳಿಕ ನಾನು ನನ್ನ ಪತ್ನಿಯೊಂದಿಗೆ ವಿರಾಜಪೇಟೆಯುಲ್ಲಿ ನೆಲೆಸಿದ್ದು, ಆಗಾಗ್ಗೆ ಕೆದಮಳ್ಳೂರು ಗ್ರಾಮಕ್ಕೆ ಹೋಗಿ, ನನ್ನ ಹಿಸ್ಸೆಗೆ ಬಂದಿದ್ದ ಸ್ವತ್ತುಗಳ ಉಸ್ತುವಾರಿಯನ್ನು ನೋಡಿಕೊಂಡು ಬರುತ್ತಿದ್ದೆನು ಎಂದರೆ ಸರಿಯಲ್ಲ.

ನನ್ನ ತಂದೆ 2009 ರಲ್ಲಿ ಮೃತರಾಗಿರುತ್ತಾರೆ. ದಿನಾಂಕ 12.05.2006 ರಂದು ನನ್ನ ತಂದೆ ನೋಂದಾಯಿತ ಮರಣ ಶಾಸನ ಪತ್ರವನ್ನು ಬರೆದಿರುವ ವಿಚಾರ ನನಗೆ ಗೊತ್ತಿದೆ. 2010 ರಲ್ಲಿ ಆ ವಿಚಾರ ನನಗೆ ಗೊತ್ತಾಗಿರುತ್ತದೆ. ನಾನು ಮರಣ ಶಾಸನ ಪತ್ರವನ್ನು ಯಾವುದೇ ದಾವೆಯನ್ನು ಸಲ್ಲಿಸುವ ಮೂಲಕ ಪ್ರಶ್ನಿಸಿರುವುದಿಲ್ಲ. 2ನೇ ಪ್ರತಿವಾದಿ ನನ್ನ ತಂಗಿಯಾಗಿದ್ದು, ಆಕೆ ಪಾರಾಣೆಯ ನಿವಾಸಿಯಾದ ರವಿಯವರನ್ನು ವಿವಾಹವಾಗಿ ಅವರೊಂದಿಗೆ ವಾಸವಾಗಿದ್ದರು ಎಂದರೆ ಸರಿ. ರವಿರವರಿಗೆ ಪಿತ್ರಾರ್ಜಿತ ಆಸ್ತಿಗಳು ಇವೆ. ನನ್ನ ತಂಗಿ ರವಿಯವರೊಂದಿಗೆ ಆರು ವರ್ಷ ವಾಸವಾಗಿದ್ದರು. ನನ್ನ ತಂಗಿಗೆ ಒಂದು ಮಗು ಆಗಿ, ಆರು ವರ್ಷ ಕಳೆದ ನಂತರ ರವಿಯವರು ಕಾಣೆಯಾಗಿರುತ್ತಾರೆ. ಕಾಣೆಯಾಗುವವರೆಗೂ ರವಿಯವರು ತಮಗೆ ಸೇರಿದ ಆಸ್ತಿಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ಅವರ ಸಹೋದರ ನೋಡಿಕೊಳ್ಳುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ರವಿ ರವರು ತಮಗೆ ಸೇರಿದ ಆಸ್ತಿಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದು, ಅವುಗಳಿಂದ ಬರುತ್ತಿದ್ದ ಆದಾಯದ ಉಸ್ತುವಾರಿಯನ್ನು 2ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಾವಾಅನುಸೂಚಿಯ 4ನೇ ಸ್ವತ್ತನ್ನು 2ನೇ ಪ್ರತಿವಾದಿಯು ನೋಂದಾಯಿತ ಕ್ರಯಪತ್ರದ ಮೂಲಕ ದಿನಾಂಕ 09.05.2007 ರಂದು ಬೇರೇರಾ ಅಯ್ಯಣ್ಣ ರವರಿಂದ ಖರೀದಿಸಿದ್ದರು ಎಂದರೆ ಸರಿ. ಕ್ರಯಪತ್ರವಾದ ಬಳಿಕ 2ನೇ ಪ್ರತಿವಾದಿಯು ಕಂದಾಯ ದಾಖಲೆಗಳನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಂಡು, ಮನೆ ನಿರ್ಮಿಸಿಕೊಂಡು ವಾಸವಾಗಿದ್ದಾರೆ ಎಂದರೆ

ಸರಿ. 2ನೇ ಪ್ರತಿವಾದಿಯು ಸದರಿ ಸ್ವತ್ತನ್ನು ತನ್ನ ಗಂಡನ ಕುಟುಂಬದ ಸ್ವತ್ತುಗಳಿಂದ ಬಂದ ಆದಾಯದಿಂದ ಖರೀದಿಸಿದ್ದರು ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯು ನಮ್ಮ ಕುಟುಂಬದ ಆದಾಯದಿಂದ ದಾವಾ 4ನೇ ಅನುಸೂಚಿ ಸ್ವತ್ತನ್ನು ಖರೀದಿಸಿದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ದಾವಾ 4ನೇ ಅನುಸೂಚಿ ಸ್ವತ್ತು ಮೊದಲು ಅಂಬಟ್ಟಿ ಗ್ರಾಮಕ್ಕೆ ಸೇರಿದ್ದು, ಪ್ರಸ್ತುತ ವಿರಾಜಪೇಟೆ ನಗರದ ನಿಸರ್ಗ ಲೇಓಟ್ ನಲ್ಲಿ ಇದೆ ಎಂದರೆ ಸರಿ. ದಾವಾ 5ನೇ ಅನುಸೂಚಿ ಸ್ವತ್ತಿಗೆ ವಿಸ್ತೀರ್ಣ ಮತ್ತು ಚೆಕ್ಕುಬಂಧಿಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತಿನ ದಾಖಲೆಯು 2ನೇ ಪ್ರತಿವಾದಿಯ ಮಗನ ಹೆಸರಿನಲ್ಲಿ ಇದೆ. ಅದನ್ನು ಸಹಾ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಓಮಿನಿ ಕಾರ್ ನ ನೋಂದಣಿ ದಾಖಲೆ ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದ ಆರ್.ಸಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ದಾವಾ 7 ನೇ ಅನುಸೂಚಿಯ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಇದೆ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ
(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.